**ಓ ಎಸ್ ನಂಃ 10/2015**
**ಡಿ ಡಬ್ಲ್ಯೂ ಃ 1**

**ದಿಃ 25.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಆರ್ ಎನ್ ವಕೀಲರಿಂದಃ-**

ಚಿಕ್ಕಮುತ್ತಯ್ಯನವರಿಗೆ 5 ಮಕ್ಕಳು ಇದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ತಾವು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮುತ್ತಮ್ಮ ತಮ್ಮ ಅತ್ತೆ ಎಂದು ತೋರಿಸಲು ತಾವು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಮಗೂ ಹಾಗೂ ತಮ್ಮ ತಂದೆಗೂ ಹನುಮಯ್ಯನವರ ಕುಟುಂಬದ ನಡುವೆ ಯಾವುದೆ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹನುಮಯ್ಯನವರಿಗೆ ಯಾವುದೇ ಸಂತತಿ ಹಾಗೂ ವಾರಸುದಾರರು ಇಲ್ಲದ ಕಾರಣ 1996 ಮತ್ತು 1999 ರಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 2 ಮತ್ತು 3 ನೇ ವಾದಿಗಳಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟು, ದಾವಾ ಸ್ವತ್ತುಗಳ ಸ್ವಾಧೀನಾನುಭವವನ್ನು 2 ಮತ್ತು 3 ವಾದಿಗಳಿಗೆ ಬಿಟ್ಟುಕೊಟ್ಟು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹನುಮಯ್ಯನವರು 2 ಮತ್ತು 3 ನೇ ವಾದಿಗಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮೂಲ ದಾಖಲಾತಿಗಳು ತಮ್ಮ ಬಳಿ ಇವೆಯಾ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಹನುಮಯ್ಯನವರಿಗೆ ವಯಸ್ಸಾದ ಕಾರಣ ಮತ್ತು ಅವರಿಗೆ ಓಡಾಡಲು ಸಾಧ್ಯವಿಲ್ಲದ ಕಾರಣ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 2 ಮತ್ತು 3 ನೇ ವಾದಿಗಳಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು ಅದರ ಪ್ರಕಾರ ಕ್ರಯ ಪತ್ರವನ್ನು ಮಾಡಿಕೊಡದ ಕಾರಣ, ದಿಃ 15.11.1999 ರಂದು ದಾವಾ ಸ್ವತ್ತುಗಳಿಗೆ 2 ಮತ್ತು 3 ನೇ ವಾದಿಗಳ ಹೆಸರಿಗೆ ಮರಣ ಶಾಸನ ಪತ್ರವನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನ ಪತ್ರದಲ್ಲಿ ಹನುಮಯ್ಯನವರು ಅವರಿಗೆ ಯಾವುದೆ ಸಂತತಿ ಹಾಗೂ ವಾರಸುದಾರರು ಇಲ್ಲ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಹನುಮಯ್ಯನವರು 2 ಮತ್ತು 3ನೇ ವಾದಿಗಳಿಗೆ ಬರೆದುಕೊಟ್ಟಿರುವ ಕ್ರಯ ಪತ್ರ ಹಾಗೂ ಮರಣ ಶಾಸನ ಪತ್ರದ ಆಧಾರದ ಮೇರೆಗೆ ವಾದಿಗಳು ಅಸಲು ದಾವಾ ಸಂಖ್ಯೆ 449/11 ರಂತೆ ದಾವೆಯನ್ನು ಸಲ್ಲಿಸಿ ಶಾಶ್ವತ ನಿರ್ಬಂದಕಾಜ್ಞೆ ಆದೇಶವನ್ನು ಪಡೆದುಕೊಂಡಿದ್ದಾರೆ ಎಂದರೆ

ಓ ಎಸ್ ನಂಃ 10/2015
ಡಿ ಡಬ್ಲ್ಯೂ ಃ 1

ಸಾಕ್ಷಿ ಸದರಿ ದಾವೆಯಲ್ಲಿ ನಾವು ಪಕ್ಷಗಾರರು ಅಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 2 ಮತ್ತು 3 ನೇ ವಾದಿಗಳೇ ಮಾಲೀಕರಾದ ಕಾರಣ ದಿಃ 31.03.2012 ರಂದು 1 ನೇ ವಾದಿಗೆ ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವೇನಾದರೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾನ ಪತ್ರದ ಬಗ್ಗೆ ತಮಗೆ ಗೊತ್ತಿದೆ ಎಂದರೆ ಸಾಕ್ಷಿಯು ಈ ದಾವೆಯನ್ನು ಹೂಡಿದ ನಂತರ ನನಗೆ ಗೊತ್ತಾಗಿದೆ ಎಂದು ನುಡಿಯುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ಸದರಿ ದಾನ ಪತ್ರವು ತಮಗೆ ಬಾದ್ಯವಾಗುವುದಿಲ್ಲ ಎಂಬುದಾಗಿ ನಮೂದು ಮಾಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 3 ರ ರಶೀದಿಯನ್ನು ತಮ್ಮ ತಂದೆಯವರು ಯಾವ ಆಧಾರದ ಮೇರೆಗೆ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರದ ಆಧಾರದ ಮೇರೆಗೆ ಎಂದು ನುಡಿಯುತ್ತಾರೆ. ನಿಡಿ 3 ರ ರಶೀದಿಯನ್ನು ತಾವು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ದಿಃ 26.11.1999 ರ ಮರಣ ಶಾಸನ ಪತ್ರವನ್ನು ತಾವು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಹನುಮಯ್ಯನವರು ತಮ್ಮ ತಂದೆಗೆ ಯಾವುದೇ ಮರಣ ಶಾಸನ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹನುಮಯ್ಯನವರಿಗೆ ಯಾವುದೇ ಸಂತತಿ ಹಾಗೂ ವಾರಸುದಾರರು ಇಲ್ಲದ ಕಾರಣ ಅವರ ಅಂತ್ಯ ಸಂಸ್ಕಾರವನ್ನು ವಾದಿಗಳೇ ನೆರವೇರಿಸಿರುತ್ತಾರೆ ಎಂದರೆ ಸರಿಯಲ್ಲ. ಹನುಮಯ್ಯನವರಿಗೆ ಯಾವುದೇ ಸಂತತಿ ಹಾಗೂ ವಾರಸುದಾರರು ಇಲ್ಲದ ಕಾರಣ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ವಾದಿಗಳಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 833/2014 ರಂದು ಮಲ್ಲಯ್ಯ ಮತ್ತು ಇತರರು ಸಿದ್ದಪ್ಪ ಮತ್ತು ವಾದಿಗಳ ವಿರುದ್ದ ಸಲ್ಲಿಸಿರುವ ದಾವೆ ಬಗ್ಗೆ ತಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿದೆ ಎಂದು ನುಡಿಯುತ್ತಾರೆ. ಸದರಿ ದಾವೆಯ ವಾದ ಪತ್ರದ 7 ಮತ್ತು 8 ನೇ ಖಂಡಿಕೆಯಲ್ಲಿ 1 ನೇ ಪ್ರತಿವಾದಿ ಸಿದ್ದಪ್ಪನವರು ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ತಾವು ತಮ್ಮ ಪ್ರತಿವಾದ ಪತ್ರದಲ್ಲಿ ಅಲ್ಲಗಳೆದಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ತಾವು ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಹನುಮಯ್ಯನವರ ಮರಣ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

**ಓ ಎಸ್ ನಂಃ 10/2015**
**ಡಿ ಡಬ್ಲ್ಯೂ ಃ 1**

ದಾವಾ ಸ್ವತ್ತುಗಳಿಗೆ ವಾದಿಗಳೇ ಮಾಲೀಕರಾದ ಕಾರಣ 2007 - 2008 ನೇ ಸಾಲಿನಲ್ಲಿ ಚೋಳನಾಯಕನಹಳ್ಳಿ ಸೇವಾ ಸಹಕಾರ ಬ್ಯಾಂಕ್ ನಿಂದ ವಾದಿಗಳು ರೂ.40,000/- ಹಣವನ್ನು ಸಾಲವಾಗಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ಬ್ಯಾಂಕ್ ಮನ್ನಾ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ವಾದಿಗಳು ದಾವಾ ಸ್ವತ್ತುಗಳಿಗೆ ಮಾಲಿಕರಾದ ಕಾರಣ 2015 ನೇ ಸಾಲಿನ ತನಕ ಪಹಣಿ ಪತ್ರಿಕೆಗಳು ಅವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ತಮ್ಮ ತಂದೆಯವರು ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿಕೊಂಡು ದಾವಾ ಸ್ವತ್ತುಗಳಿಗೆ ಖಾತೆಯನ್ನು ತಮ್ಮ ತಂದೆಯವರ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಖಾತೆಯು ತಮ್ಮ ತಂದೆಯವರ ಹೆಸರಿಗೆ 2016- 17 ನೇ ಸಾಲಿನಿಂದ ಬರುತ್ತಿದೆ ಎಂದರೆ ಸರಿ. 2016 ನೇ ಸಾಲಿಗಿಂತ ಪೂರ್ವದಲ್ಲಿ ದಾವಾ ಸ್ವತ್ತುಗಳ ಖಾತೆಯು ವಾದಿಗಳ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ತಮ್ಮ ತಂದೆಯವರು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ದಾವಾ ಸ್ವತ್ತುಗಳ ಖಾತೆಯನ್ನು ಅವರ ಹೆಸರುಗಳಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನ ಮಾಲೀಕರಾದ ಕಾರಣ ದಿಃ 21.06.2007 ರಂದು ಬೆಂಗಳೂರಿನ ವಿಜಯನಗರದ ಪ್ರಿಯಾಕೃಷ್ಣರವರಿಗೆ ಕ್ರಯದ ಕರಾರು ಪತ್ರವನ್ನು ನಿಪಿ 46 ರ ಪ್ರಕಾರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ಪರವಾಗಿ ನ್ಯಾಯಾಲಯದ ಶಾಶ್ವತ ನಿರ್ಬಂದಕಾಜ್ಞೆ ಆದೇಶ ಜಾರಿಯಲ್ಲಿದ್ದರು ಸಹ 2016 ನೇ ಸಾಲಿನಿಂದ ಇಲ್ಲಿಯ ತನಕ ತಾವು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಗಳ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಿದ್ದೀರ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**